ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, 9ನೇ ಆಗಸ್ಟ್ 1995, ಸಾಯನ ಸೌರ ಶ್ರಾವಣ 1917

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್‌ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಡಿ.ವಿ. ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಛೇಂಬರ್‌ಗೆ ಬಂದು ಪ್ರಸ್ತಾಪ ಮಾಡಿದಂತೆ ಇವತ್ತು.....

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಒಂದು ನಿಮಿಷ, ಸದಾನಂದಗೌಡರು ಏನೋ ಹೇಳುತ್ತಿದ್ದಾರೆ.

ಹುಣಸೂರು ತಾಲ್ಲೂಕು ಪಕ್ಷಿರಾಜಪುರದಲ್ಲಿ ನಡೆದ ಗಲಭೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಅಧ್ಯಕ್ಷರೇ, ಇವತ್ತು ಇಲ್ಲಿ ನಡೆಯುತ್ತಿದೆ. ಇಂಥಹ ಸಂದರ್ಭದಲ್ಲಿ ಇವತ್ತು ಹುಣಸೂರು ತಾಲ್ಲೂಕು ಪಕ್ಷಿರಾಜಪುರ ಎನ್ನುವಂಥ ಊರಿನಲ್ಲಿ ಸಾರಾಯಿ ಬಂದ್ ಮಾಡಬೇಕು, ಅಲ್ಲಿ ವ್ಯವಹಾರ ಮಾಡುವುದು ಬೇಡ ಎಂದು ಜನ ಹೇಳಿದ್ದಕೋಸ್ಕರ ಗ್ರಾಮಕ್ಕೆ ನುಗ್ಗಿ ದಾಂಧಲೆ ಮಾಡಿ ಇವತ್ತು ಪೋಲೀಸ್ ಜೀಪನ್ನು ತೆಗೆದುಕೊಂಡು ಬಂದು ನಮ್ಮ ಎಕ್ಸೈಸ್ ಇನ್ಸ್‌ಪೆಕ್ಟರುಗಳು ಬಂದು ಗೂಂಡಾಗಳನ್ನು ಕರೆದುಕೊಂಡು ಬಂದು, ಆ ಪಕ್ಷಿರಾಜಪುರದಲ್ಲಿ.....

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. we will have it examined.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಅಲ್ಲಿ ಪರಿಸ್ಥಿತಿ ಏನಗಿದೆ ಎಂದರೆ ಅಲ್ಲಿ ಇಬ್ಬರು ಆಸ್ಪತ್ರೆಯಲ್ಲಿ ಮರಣಾವಸ್ಥೆಯಲ್ಲಿ ಇದ್ದಾರೆ. ಯಾರು ಆ ವ್ಯಕ್ತಿಯನ್ನು ತಡೆದ. ಆ ವ್ಯಕ್ತಿಯ ಪರಿಸ್ಥಿತಿ ಈ ರೀತಿಯಾಗಿದೆ. ಈ ಒಂದು ವಿಶೇಷವಾದ ಸಂದರ್ಭ ಇದಾಗಿರುವುದರಿಂದ ಇದಕ್ಕೆ ಅವಕಾಶ ಮಾಡಿಕೊಡಬೇಕು, ಯಾವ ಒಂದು ಸಾಕ್ಷರತಾ ಆಂಧೋಲನ ನಡೆದು ಅಲ್ಲಿ ಹೆಂಡದ ಮಾರಾಟ ಆಗಬಾರದು ಎಂದು ಹೇಳಿ ಅಲ್ಲಿ ಯಾರು ಇವತ್ತು ತಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ....

(ಗೊಂದಲ)

ಅಧ್ಯಕ್ಷರು : ನಿನ್ನೆಯೆಲ್ಲಾ ಬಹಳ ಟೈಮ್ ಆಗಿರುವುದರಿಂದ ನಾನು ಎಲ್ಲರಿಗೂ ಟೈಮ್ ಕೊಡುತ್ತೇನೆ ಆಯಿತು ಪ್ರಸ್ತಾಪ ಮಾಡಿದಿರಲ್ಲಾ.

(ಗೊಂದಲ)

ಅಧ್ಯಕ್ಷರು : ಡೀಟೈಲ್ಸ್ ಕೊಡಿ. I will ask the Government .....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಪೋಲೀಸರು ಹೀಗೆ.....

(ಸಭೆಯಲ್ಲಿ ಅತೀವ ಗೊಂದಲ. ಬಿ.ಜೆ.ಪಿ. ಮತ್ತು ಆಡಳಿತ ಪಕ್ಷದ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು. ಯಾರ ಮಾತೂ ಕೂಡ ಕೇಳಿಸದಷ್ಟು ಗೊಂದಲ ವಾತಾವರಣ ನಿರ್ಮಾಣವಾಯಿತು..)

MR. SPEAKER : Why don't you co-operate with me?

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಹಲವಾರು ಸದಸ್ಯರುಗಳು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಬಂದು ನಿಂತು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ನಾನು ಮಾತನಾಡುತ್ತೇನೆ. ಎಲ್ಲರೂ ಕುಳಿತುಕೊಳ್ಳಿ. ನನಗೂ ಮಾತನಾಡುವುದಕ್ಕೆ ಬಿಡಿ you don't react.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ತಮ್ಮಲ್ಲಿ ಕ್ಷಮಾಪಣೆ ಕೇಳುತ್ತೇನೆ.....

ಶ್ರೀ ಕೆ.ಎಸ್. ಈಶ್ವರಪ್ಪ : ಹರಿಜನರು-ಗಿರಿಜನರನ್ನು ಲೂಟಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೋ?

(ಗೊಂದಲ)

MR. SPEAKER : you allow them. ನಾನು ತಮಗೆಲ್ಲರಿಗೂ ನೈತಿಕವಾದ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಇವತ್ತು ಶ್ರೀ ಖರ್ಗೆಯವರು ಭಾಷಣವನ್ನು ಪ್ರಾರಂಭ ಮಾಡಬೇಕಾಗಿತ್ತು. ನಾನು ಹರಿಜನ ಎಂದು ಕರೆಯಲಿಲ್ಲ, ಪರಿಶಿಷ್ಟ ಜಾತಿ ಮುಖಂಡ ಎಂದು ಕರೆಯುತ್ತೇನೆ. ನೀವು ಅವರು ಮಾತನಾಡಬಾರದು ಎಂದು ಹೀಗೆ ಮಾಡಲು ಬಂದಿದ್ದೀರಾ? you want to prevent a Scheduled Caste leader from addressing this House? Please get back to your seats.

(INTERRUPTIONS)

MR. SPEAKER : I cannot be a party for this kind of proceedings. I am adjourning the House.

house Adjourned At 9-35 AM.

(ಸಭೆಯು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಪುನರಾರಂಭಗೊಂಡಿತು. ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ, ಇವತ್ತಿನ ಈ ಘಟನೆ ಬಗ್ಗೆ ತಮ್ಮ ಮನಸ್ಸಿಗೆ ತುಂಬಾ ನೋವಾಗಿದೆ. ನಿಮ್ಮ ಮನಸ್ಸಿಗೆ ನೋವು ತರಬೇಕು, ಕಾರ್ಯಕಲಾಪ ಅಡ್ಡಿ ಮಾಡಬೇಕಂಬ ಉದ್ದೇಶ ತಮ್ಮದು ಯಾರದೂ ಇಲ್ಲ, ಅಲ್ಲದೆ ಹಿರಿಯ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡುವುದನ್ನು ತಡೆಯಬೇಕೆಂಬ ಉದ್ದೇಶವೂ ಅಲ್ಲ, ಇವತ್ತಾದಮೇಲೆ ಮತ್ತೆ ನಾವು ಸೇರುವುದು 21ನೇ ತಾರೀಖು ಮಾತ್ರ. ಒಂದು ಕೆಟ್ಟ ಘಟನೆ ನಡೆದುಹೋಗಿತ್ತು. ದೂರವಾಣಿ ಮೂಲಕ ತಮ್ಮನ್ನು ಸಂಪರ್ಕ ಮಾಡಿದೆ. ತಾವು ಔದಾರ್ಯದಿಂದ ಒಂದೆರಡು ನಿಮಿಷ ಅದನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಋಣಿಯಾಗಿದ್ದೇನೆ. ಪ್ರಸ್ತಾಪ ಮಾಡಿದಾಗ ಒಂದೆರಡು ನಿಮಿಷ ಅವಕಾಶವಾಗಿದ್ದರೆ ಈ ಘಟನೆ ಆಗುತ್ತಿರಲಿಲ್ಲ, ತಮಗೆ ಗೊತ್ತಿದೆ ಇವತ್ತು

ಹುಣಸೂರು ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ನಮ್ಮ ಶಾಸಕ ವಿಜಯಶಂಕರ್‌ರವರು ಮನೆಗ ಬಂದು ಕಣ್ಣೀರುಹಾಕಿ ಯಡಿಯೂರಪ್ಪನವರೇ, ಆ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ ಆ ಕ್ಷಣದಲ್ಲೇ ನಾನು ಪ್ರಸ್ತಾಪ ಮಾಡದೇ ಇದ್ದಿದ್ದರೆ ಸಭೆ ಪ್ರಾರಂಭವಾದ ಮೇಲೆ ಮಧ್ಯದಲ್ಲಿ ಕಾನೂನು ಚೌಕಟ್ಟಿನಲ್ಲಿ ಪ್ರಸ್ತಾಪಿಸುವುದು ಸರಿಯಾಗಲಿಕ್ಕಿಲ್ಲ. ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿದೆ ಹಾಗುತ್ತದೇನೋ ಎಂಬ ಕಾರಣಕ್ಕಾಗಿ ನಾನು ಪ್ರಸ್ತಾಪಿಸಿದೆ. ದಯಮಾಡಿ ತಾವು ಅದನ್ನು ಅನ್ಯಥಾ ಭಾವಿಸಬಾರದು. ಇದು ಗಂಭೀರವಾದ ಸಂಗತಿ ಆಗಿರುವುದರಿಂದ ತಾವು ಅಪ್ಪಣೆ ಕೊಟ್ಟರೆ, ಈ ಸದನದ ಕಾರ್ಯಕಲಾಪಕ್ಕೆ ನಮ್ಮಿಂದ ಅಡ್ಡಿಯಾಗುತ್ತದೆ ಎಂದರೆ ಕಾರ್ಯಕಲಾಪ ನಡೆಯಲಿ, ಎಲ್ಲಾರೀತಿಯ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಲ್ಲಿ ಕೂತು ಕಾರ್ಯಕಲಾಪ ನಡೆಯದಿರುವಂತೆ ನೋಡಿಕೊಳ್ಳುವ ಸಂಸ್ಕೃತಿಯಲ್ಲಿ ಬೆಳೆದಂತಹ ಪಕ್ಷ ನಮ್ಮದಲ್ಲ. ಆದ್ದರಿಂದ ದಯಮಾಡಿ ಇದರ ಮಹತ್ವ ತಾವು ಅರ್ಥಮಾಡಿಕೊಂಡು ಸೂಕ್ತ ಸಮಯ ನಿಗದಿಮಾಡಿ ಇದಕ್ಕೊಂದು ಪರಿಹಾರ ಹುಡುಕಬೇಕು. ಇದಕ್ಕೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವರದಿಗಳನ್ನು ಒಪ್ಪಿಸುವುದು

ಶ್ರೀ ಯು.ಆರ್. ಸಭಾಪತಿ : ಬೆಂಗಳೂರಿನ ಕೋರಮಂಗಲ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ರಾಷ್ಟ್ರೀಯ ಕ್ರೀಡಾವಸತಿ ಸಮುಚ್ಚಯ ಮೇಲಿನ ಪ್ರಥಮ ವರದಿಯನ್ನು ಅಂದಾಜು ಸಮಿತಿಯ ಸದಸ್ಯನಾದ ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವರದಿಯನ್ನು ಒಪ್ಪಿಸಲಾಯಿತು

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ವಿನಂತಿ ಏನೆಂದರೆ ನಮ್ಮ ಸ್ನೇಹಿತರೊಬ್ಬರು ಕೊಲೆ ಕೇಸ್ ಬಗ್ಗೆ ಮೆನಷನ್ಮಾಡಲು ಅವಕಾಶ ಕೇಳಿದರು ಕೆ.ಜಿ.ಎಫ್. ಸದಸ್ಯರೂ ಕೇಳಿದರು. ಬಹಶಃ ಲಂಚ್ ಅವರ್ ಆದಮೇಲೆ ಅವರಿಗೆಲ್ಲಾ ಅನುವು ಮಾಡಿಕೊಡಬೇಕು. ಹಾಗೂ ನಮ್ಮ ನಾಯಕರು ಎತ್ತಿದ ವಿಷಯಕ್ಕೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಗಬಹುದು.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದದ್ದು)

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಅಧ್ಯಕ್ಷರೇ, ಇವತ್ತಿನ ದಿವಸ ನಾನು ಪ್ರಮುಖವಾಗಿ ಪ್ರಸ್ತಾಪ ಮಾಡುವುದು ಸರ್ಕಾರದ ಕೆಲವು ಲೋಪದೋಷಗಳನ್ನು ಮತ್ತು ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ, ಅದರ ಆಡಳಿತವೈಖರಿ ಏನು, ಆಡಳಿತ ನಡೆಸುವಾಗ ಯಾವ ರೀತಿ ಇವರು ನಡೆದುಕೊಂಡಿದ್ದಾರೆ ಮತ್ತು ಈ ರಾಜ್ಯದ ಜನರ ಏಳಿಗೆಗಾಗಿ ಅಭಿವೃದ್ಧಿಗಾಗಿ ಎಷ್ಟರಮಟ್ಟಿಗೆ ಇವರು ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಅದೇ ರೀತಿಯಾಗಿ ಬರಗಾಲದ ಬವಣೆಯಲ್ಲಿರುವ ಜನರನ್ನು ಪರಿಹಾರ ಕೊಡುವ ಕೆಲಸ ಎಷ್ಟರಮಟ್ಟಿಗೆ ಮಾಡಿದ್ದಾರೆ ಮತ್ತು ಟ್ರಾನ್ಸ್‌ಫರ್ ಹಗರಣದಲ್ಲಿ ಎಷ್ಟರಮಟ್ಟಿಗೆ ಸರ್ಕಾರದವರೇ ನೇರವಾಗಿ ಇನ್‌ವಾಲ್ವ್ ಆಗಿದ್ದಾರೆಂದು ಕೂಡ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಇವತ್ತಿನದಿವಸ ಮಾನ್ಯ ವಿರೋಧಪಕ್ಷದ ನಾಯಕ ಶ್ರೀ ಯಡಿಯೂರಪ್ಪನವರು ತಂದಿರುವ ಅವಿಶ್ವಾಸ ಸೂಚನೆ, ಬಹಶಃ ಸದನದಲ್ಲಿರುವ ಇಡೀ ವಿರೋಧಪಕ್ಷದ ಜನ ಅದಕ್ಕೆ ರುಜು ಹಾಕಿ ಬೆಂಬಲಿಸಬಹುದಿತ್ತು